# ಕರ್ನಾಟಕ ಸರ್ಕಾರ

## ವಾಣಿಜ್ಯ ತೆರಿಗೆ ಇಲಾಖೆ

ಸಂಖ್ಯೆ:ವಾತೆಅಆ(ಜಾರಿ):ದವ/ಉ.ಮ./ಸಿಆರ್:13/11-12

ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರ ಕಛೇರಿ,
(ಜಾರಿ) ದಕ್ಷಿಣ ವಲಯ, ವಾಣಿಜ್ಯ ತೆರಿಗೆ
ಕಾರ್ಯಾಲಯ-2, 3ನೇ ಮಹಡಿ ಬಿ ಬ್ಲಾಕ್,
ರಾಜೇಂದ್ರನಗರ, ಕೋರಮಂಗಲ,
ಬೆಂಗಳೂರು-47, ದಿನಾಂಕ:07-01-2012.
ಫೋನ್ ನಂ.080-25704971
ಫ್ಯಾಕ್ಸ್ ನಂ.080-25704972

## :: ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ::

ವಾಣಿಜ್ಯ ತೆರಿಗೆ ಕಾರ್ಯಾಲಯ-2, ಕೋರಮಂಗಲ, ರಾಜೇಂದ್ರನಗರ, ಬೆಂಗಳೂರು-47, ಇಲ್ಲಿ (ಎ ಮತ್ತು ಬಿ ಬ್ಲಾಕ್ ಕಟ್ಟಡದ ನಡುವೆ ಬರುವ ನೆಲಮಹಡಿಯ ಪಶ್ಚಿಮೊತ್ತರ ಭಾಗದಲ್ಲಿ -ವಿಸ್ತೀರ್ಣ 1099 ಚದರ ಅಡಿಗಳು) ನೌಕರರ ಉಪಹಾರ ಮಂದಿರವನ್ನು 2 ವರ್ಷದ ಅವಧಿಗೆ ಬಾಡಿಗೆ ಅಧಾರದ ಮೇಲೆ ನಡೆಸಲು ಅರ್ಹ ಹೋಟೇಲು ಮಾಲೀಕರಿಂದ ಎರಡು ಲಕೋಟೆ ಪದ್ಧತಿಯಲ್ಲಿ (ಅರ್ಹತಾ ಬಿಡ್ ಮತ್ತು ಆರ್ಥಿಕ ಬಿಡ್) ಟೆಂಡರುಗಳನ್ನು ಅಹ್ವಾನಿಸಲಾಗಿದೆ. ನಿಗಧಿತ ಟೆಂಡರ್ ಫಾರಂ ಮತ್ತು ನಿಬಂಧನೆಗಳನ್ನು ವಾಣಿಜ್ಯ ತೆರಿಗೆ ಅಪರ ಅಯುಕ್ತರು (ಜಾರಿ) ದಕ್ಷಿಣ ವಲಯ, ಕೋರಮಂಗಲ, ಬೆಂಗಳೂರು, ಇಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ ಅಥವಾ ಇಲಾಖೆಯ ಅಂತರ ಜಾಲ ತಾಣ (website) http://ctax.kar.nic.in. ಇಲ್ಲಿ ಪಡೆಯಬಹುದಾಗಿದೆ.

ಈ ವಿಷಯಕ್ಕೆ ಸಂಬಂಧಪಟ್ಟ ಯಾವುದೇ ವಿವರಗಳು ನಿಬಂಧನೆಗಳು ಬೇಕಾದಲ್ಲಿ ಕಛೇರಿಯ ಕೆಲಸದ ವೇಳೆಯಾದ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯೊಳಗೆ ಕಛೇರಿಯನ್ನು ಸಂಪರ್ಕಿಸಬಹುದು. ಟೆಂಡರ್‌ದಾರರು ಟೆಂಡರ್‌ನಲ್ಲಿ ಸೂಚಿಸಿರುವ ನಿಭಂದನೆಗಳನ್ನು ಪಾಲಿಸಬೇಕಾಗಿರುತ್ತದೆ. ಷರತ್ತುಗಳನ್ನು ವಿಧಿಸಿ ಸಲ್ಲಿಸಿದ ಟೆಂಡರ್‌ಗಳನ್ನು ಕಾರಣ ನೀಡದೇ ತಿರಸ್ಕರಿಸಲಾಗುವುದು.

ಟೆಂಡರ್‌ದಾರರು ಅರ್ಹತಾ ಬಿಡ್‌ನಲ್ಲಿ ತೋರಿಸಿರುವ ಅಂಶಗಳನ್ನು ಹಾಗೂ ಅದಕ್ಕೆ ಪೂರಕವಾಗಿ ಹೊಂದಿರುವ ಲೈಸನ್ಸ್‌ಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿ ಪ್ರತ್ಯೇಕವಾದ ಮೊಹರು ಮಾಡಿದ ಲಕೋಟೆಯಲ್ಲಿಟ್ಟು ಸಲ್ಲಿಸಬೇಕು. ಅದರ ಮೇಲೆ ಅರ್ಹತಾ ಬಿಡ್ ಎಂದು ಬರೆದು ಸಲ್ಲಿಸಬೇಕು. ಅರ್ಹತಾ ಬಿಡ್‌ನಲ್ಲಿ ಅಯ್ಕೆಯಾದ ಟೆಂಡರ್‌ದಾರರ ಆರ್ಥಿಕ ಬಿಡ್‌ಗಳನ್ನು ಮಾತ್ರ ತೆರೆಯಲಾಗುವುದು.

ಆರ್ಥಿಕ ಬಿಡ್‌ನಲ್ಲಿ ಇಲಾಖೆ ನಿಗಧಿಪಡಿಸಿದ ಕನಿಷ್ಠ ಮಾಸಿಕ ಬಾಡಿಗೆಗಿಂತ ಹೆಚ್ಚು ದರಕ್ಕೆ ಬಿಡ್ ಮಾಡುವವರು, ಬಿಡ್ ದರವನ್ನು ನಮೂದಿಸಿ ಮೊಹರು ಮಾಡಿದ ಲಕೋಟೆಯಲ್ಲಿ ಸಲ್ಲಿಸಬೇಕು ಹಾಗೂ ಅದರ ಮೇಲೆ ಆರ್ಥಿಕ ಬಿಡ್ ಎಂದು ನಮೂದಿಸರಬೇಕು.

ಅರ್ಹತಾ ಬಿಡ್ ಲಕೋಟೆ ಮತ್ತು ಆರ್ಥಿಕ ಬಿಡ್ ಲಕೋಟೆಗಳರಡನ್ನು ಮತ್ತೊಂದು ಲಕೋಟೆಯಲ್ಲಿಟ್ಟು ಅದರ ಮೇಲೆ ಕ್ಯಾಂಟೀನ್ ನಡೆಸಲು ಟೆಂಡರು ಎಂದು ಬರೆದು ಮೊಹರು ಮಾಡಿದ ಲಕೋಟೆಯನ್ನು ದಿನಾಂಕ:23-01-2012 ರ ಸಂಜೆ 4.00 ಗಂಟೆಒಳಗೆ ಈ ಕೆಳಗೆ ಸಹಿ

ಮಾಡಿರುವವರ ಕಛೇರಿಯಲ್ಲಿ ಸಲ್ಲಿಸಬೇಕು. ನಂತರ ಬಂದ ಟೆಂಡರುಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಹತಾ ಬಿಡ್‌ಗಳನ್ನು ದಿನಾಂಕ:24-01-2012 ರಂದು ಸಂಜೆ 3.00 ಗಂಟೆಗೆ ಹಾಜರಿರುವ ಟೆಂಡರುದಾರರ ಎದುರಿನಲ್ಲಿ ತೆರೆಯಲಾಗುವುದು. ಅರ್ಹತಾ ಬಿಡ್‌ನಲ್ಲಿ ಆಯ್ಕೆಯಾದ ಟೆಂಡರುದಾರರ ಆರ್ಥಿಕ ಬಿಡ್‌ಗಳನ್ನು ದಿನಾಂಕ:25-01-2012 ರಂದು ಸಂಜೆ 3-00 ಗಂಟೆಗೆ ತೆರೆಯಲಾಗುವುದು.

ಷರತ್ತುಗಳು:

1) ಈ ಟೆಂಡರ್ ಬಗ್ಗೆ ರೂ.20,000-00 ಇ.ಎಂ.ಡಿ.ಯನ್ನು ನಿಗದಿಪಡಿಸಿದ್ದು, ಈ ಮೊಬಲಗನ್ನು ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಟೆಂಡರ್ ಜೊತೆಯಲ್ಲಿ ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಜಾರಿ) ದ.ವ. ಬೆಂಗಳೂರು, ಇವರ ಹೆಸರಿನಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
2) ಯಾವ ಕಾರಣವನ್ನು ನೀಡದೆ ಅಥವಾ ಎಲ್ಲಾ ಟೆಂಡರ್‌ಗಳನ್ನು ಸ್ವೀಕರಿಸುವ ಮತ್ತು ತಿರಿಸ್ಕರಿಸುವ ಅಧಿಕಾರವನ್ನು ಕಾಯ್ದಿರಿಸಿಕೊಳ್ಳಲಾಗಿದೆ
3) ಟೆಂಡರ್ ಪ್ರಕ್ರಿಯೆಯು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅದ್ಯಾದೇಶ 2000 ರಲ್ಲಿನ ಮಾರ್ಗಸೂಚಿಗಳಿಗೆ ಒಳಪಟ್ಟಿರುತ್ತದೆ
4) ಅಂಗೀಕೃತ ಟೆಂಡರ್‌ದಾರರು ಕರಾರು ಮಾಡಿಕೊಳ್ಳುವ ಮುನ್ನ 3 ತಿಂಗಳ ಬಾಡಿಗೆಗೆ ಸಮನಾದ ಹಣವನ್ನು ಭದ್ರತಾ ಠೇವಣಿಯಾಗಿ ಡಿ.ಡಿ.ರೂಪದಲ್ಲಿ ನೀಡಬೇಕಾಗಿರುತ್ತದೆ ಮತ್ತು ಪ್ರತಿ ತಿಂಗಳು 10ನೇ ತಾರೀಖಿನ ಒಳಗೆ ಮಾಸಿಕ ಬಾಡಿಗೆ ಹಣವನ್ನು ಬ್ಯಾಂಕ್ ಡಿ.ಡಿ. ಮುಖಾಂತರ ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಜಾರಿ) ದಕ್ಷಿಣ ವಲಯ, ಬೆಂಗಳೂರು, ಇವರಿಗೆ ಸಂದಾಯಮಾಡಬೇಕು.
5) ಟೆಂಡರ್‌ದಾರರು ಟೆಂಡರ್ ನಿಬಂಧನೆಯೊಂದಿಗೆ ಲಗತ್ತಿಸಲಾದ ಅನುಬಂಧ-1ರ ಅರ್ಹತಾ ಬಿಡ್‌ನಲ್ಲಿ ತಮ್ಮ ಸ್ವಂತ ಮಾಹಿತಿ ಮತ್ತು ಅನುಭವದ ವಿವರಗಳನ್ನು ದಾಖಲಿಸುವುದು ಹಾಗೂ ಅನುಬಂಧ-2ರ ಆರ್ಥಿಕ ಬಿಡ್‌ನಲ್ಲಿ ಇಲಾಖೆ ನಿಗಧಿಪಡಿಸಿದ ಕನಿಷ್ಠ ಮಾಸಿಕ ಬಾಡಿಗೆಗಿಂತ ಹೆಚ್ಚು ದರಕ್ಕೆ ಬಿಡ್ ಮಾಡುವವರು, ಬಿಡ್ ದರವನ್ನು ನಮೂದಿಸುವುದು. ಎರಡು ಬಿಡ್‌ಗಳನ್ನು ಸಲ್ಲಿಸದೇ ಇರುವ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸಲಾಗುವುದು.
6) ಅಯ್ಕೆಯಾಗದ ಟೆಂಡರುದಾರರಿಗೆ ಅವರ ಇ.ಎಂ.ಡಿ. ಮೊಬಲಗನ್ನು ಟೆಂಡರ್ ಪ್ರಕ್ರಿಯೆ ಮುಗಿದ ನಂತರವೇ ಹಿಂದಿರುಗಿಸಲಾಗುವುದು.
7) ಯಶಸ್ವಿ ಬಿಡ್ಡುದಾರರು ಟೆಂಡರ್ ಪ್ರಕ್ರಿಯ ಮುಗಿದು ಈ ಕಛೇರಿಯಿಂದ ಅನುಮೋದನೆ ಪತ್ರವನ್ನು ನೀಡಿದ 7 ದಿನಗಳೊಳಗೆ ಠೇವಣಿ ಮೊತ್ತದೊಡನೆ ಗುತ್ತಿಗೆ ಕರಾರನ್ನು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಇ.ಎಂ.ಡಿ. ಮೊಬಲಗನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

7.1.12

ವಾಣಿಜ್ಯ ತೆರಿಗೆ ಅಪರ ಆಯುಕ್ತರು,
(ಜಾರಿ), ದಕ್ಷಿಣ ವಲಯ, ಬೆಂಗಳೂರು.